ಇಂದು ದಿಃ**20-02-2026** ರಂದು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಇ.ಎಸ್.ಐ ವಕೀಲರಿಂದ ವಾದಿ ಪರಃ**

ನಾನು 10 ನೇ ತರಗತಿಯವರೆಗೆ ಶಾಲೆ ಕಲಿತ್ತಿದ್ದೇನೆ. ವಾದಿ ಈಕೆ ಪಕ್ಕೀರವ್ವ ಮತ್ತು ಕುಂದೂರು ಬಸಪ್ಪ ಇವರ ಮಗಳು ಎಂದರೆ ಸರಿ. ಸದರಿ ಪಕ್ಕೀರವ್ವ ಮತ್ತು ಬಸಪ್ಪ ಇವರಿಗೆ ಹನುಮಂತಪ್ಪ, ಹನುಮಕ್ಕ ಮತ್ತು ಬಸಣ್ಣ ಎಂಬ ಉಳಿದ ಮಕ್ಕಳು ಇದ್ದರು ಎಂದರೆ ಸರಿ. ನಾನು ಹನುಮಂತಪ್ಪನ ಮಗಳು ಎಂದರೆ ಸರಿ. 1 ನೇ ಪ್ರತಿವಾದಿ ಹನುಮಂತಪ್ಪನ ಹೆಂಡತಿ ಮತ್ತು 3 ನೇ ಪ್ರತಿವಾದಿ ನನ್ನ ಸಹೋದರಿ ಎಂದರೆ ಸರಿ. ವಾದಿ ಏಕೆ ಈ ದಾವೆ ಮಾಡಿದ್ದಾರೆ ಎಂದು ಮಾಹಿತಿ ಇದೆ. ದಾವಾ ಆಸ್ತಿಗಳು ಮೂಲತಃ ಪಕ್ಕೀರವ್ವ ಇವಳ ಆಸ್ತಿಗಳು ಎಂದರೆ ಸರಿ. ಸಾಕ್ಷಿ ನಮ್ಮ ತಾತನ ಜಮೀನನ್ನು ಮಾರಿ, ನನ್ನ ಅಜ್ಜಿಯ ಹೆಸರನಲ್ಲಿ ಖರೀದಿ ಮಾಡಲಾಗಿತ್ತು ಎಂದು ಹೇಳುತ್ತಾರೆ. ನನ್ನ ಅಜ್ಜನ ಹೆಸರಿನಲ್ಲಿ ಇದ್ದ ಸರ್ವೆ ನಂಬರ್ ಗಳು ಯಾವವು ಎಂದು ಗೊತ್ತಿಲ್ಲ. ಅವು ಕುಂದೂರು ಗ್ರಾಮದಲ್ಲಿ ಇದ್ದವು. ನನ್ನ ಅಜ್ಜ ಯಾರಿಗೆ ಮಾರಾಟ ಮಾಡಿದ್ದರು ಎಂದು ಗೊತ್ತಿಲ್ಲ. ನನ್ನ ಅಜ್ಜನಿಗೆ ಆರೋಗ್ಯ ಸರಿ ಇರಲಿಲ್ಲ ಎಂದು ಗೊತ್ತು, ಆ ಸಮಯದಲ್ಲಿ ಆತನ ಜಮೀನುಗಳನ್ನು ಮಾರಿ ಮಳಲಹಳ್ಳಿಯಲ್ಲಿ ಜಮೀನು ಹಿಡಿದಿದ್ದಾರೆ ಎಂದು ಗೊತ್ತು. ನನ್ನ ಅಜ್ಜನ ಜಮೀನುಗಳನ್ನು ಯಾರಿಗೆ ಮಾರಾಟ ಮಾಡಿದ್ದರು ಎಂದು ಗೊತ್ತಿಲ್ಲ. ಈ ದಾವೆಯಲ್ಲಿ ನಮ್ಮ ತಕರಾರನ್ನು ಸಲ್ಲಿಸುವ ಸುವಯದಲ್ಲಿ ಮತ್ತು ನಂತರದಲ್ಲಿ, ನನ್ನ ಅಜ್ಜನ ಹೆಸರಿಗೆ ಯಾವ ಜಮೀನುಗಳು ಇದ್ದವು ಎಂದು ಮತು ಯಾರಿಗೆ ಮಾರಾಟ ಮಾಡಿದ್ದರು ಎಂದು ತೋರಿಸಲು ನಾನು ದಾಖಲೆಗಳನ್ನು ತೆಗೆಹಿಸುವ ಪ್ರಯತ್ನ ಮಾಡಿಲ್ಲ. ನನ್ನ ಅಜ್ಜನ ಹೆಸರಿಗೆ ಇದ್ದ ಜಮೀನುಗಳನ್ನು ಮಾರಿ ದಾವಾ

ಆಸ್ತಿಗಳನ್ನು ನನ್ನ ಅಜ್ಜಿಯ ಹೆಸರಿನಲ್ಲಿ ಖರೀದಿ ಮಾಡಿದ್ದು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿ ಈ ದಾವೆಯಲ್ಲಿ ಏನು ದಾಖಲೆಗಳನ್ನು ಹಾಜರುಪಡಿಸಿದ್ದಾರೆ ಎಂದು ತಿಳಿದುಕೊಂಡಿದ್ದೇನೆ. ಪಕ್ಕೀರವ್ವ ತಾನು ಜೀವಂತ ಇದ್ದಾಗ ದಾವಾ ಆಸ್ತಿಗಳ ಕುರಿತು ಯಾವುದೇ ಪಾಲುವಿಭಾಗ ತನ್ನ ಮಕ್ಕಳಲ್ಲಿ ಮಾಡಿಕೊಟ್ಟಿಲ್ಲ ಎಂದರೆ ಸರಿ. ಪಕ್ಕೀರವ್ವ ಈ ಎರಡೂ ಆಸ್ತಿಗಳ ಕುರಿತು ಯಾವುದೇ ಮೃತ್ಯುಪತ್ರ ಮಾಡಿರಲಿಲ್ಲ ಎಂದರೆ ಸರಿ. ಪಕ್ಕೀರವ್ವ ತೀರಿಕೊಂಡ ನಂತರ, ಆಕೆಯ ವಾರಸುದಾರರು ಜಂಟಿ ಮಾಲೀಕರು ಆದರು ಎಂದರೆ ಸರಿ. ಪಕ್ಕೀರವ್ವ ತೀರಿಕೊಂಡ ನಂತರ ಆಕೆಯ ಮಕ್ಕಳು ದಾವಾ ಆಸ್ತಿಗಳ ಕುರಿತು ಪಾಲುವಿಭಾಗ ಮಾಡಿಕೊಳ್ಳಲಿಲ್ಲ. ಸಾಕ್ಷಿ ಆದರೆ ನನ್ನ ತಂದೆ ಮತ್ತು ಚಿಕ್ಕಪ್ಪ ಸೇರಿ ನ್ಯಾಯಾಲಯದಲ್ಲಿ ಸಮಪಾಲು ಮಾಡಿಕೊಂಡಿದ್ದಾರೆ ಎಂದು ಹೇಳುತ್ತಾರೆ. ಆ ಪ್ರಕರಣಕ್ಕೆ ಸಂಬಂಧಿಸಿದಂತೆ ನನಗೆ ಮಾಹಿತಿ ಇದೆ. ಅಸಲು ದಾವಾ ನಂಬರ್ 116/1997 ರಲ್ಲಿ ವಾದಿ ಪಕ್ಷಗಾರ ಎಂದು ಇರಲಿಲ್ಲ ಎಂದರೆ ಸರಿ. ಸಾಕ್ಷಿ ಆದರೆ ಮೌಖಿಕವಾಗಿ ವಾದಿ ಒಪ್ಪಿಗೆ ಕೊಟ್ಟಿದ್ದರು ಎಂದು ಹೇಳುತ್ತಾರೆ. ಸದರಿ ದಾವೆಯಲ್ಲಿ ವಾದಿ ಅವರಿಗೆ ಹಿಸ್ಸೆ ಬೇಡ ಎಂದು ಹೇಳಿದ್ದಾರೆ ಎಂದು ಕಾಣಿಸಿದ್ದಾರೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. ವಾದಿ ತನಗೆ ಆಸ್ತಿ ಬೇಡ ಎಂದು ಯಾವ ದಾಖಲೆಯ ಆಧಾರದ ಮೇಲೆ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ವಾದಿ ತವರು ಮನೆಗೆ ಬರುತ್ತಿದ್ದರು, ನನಗೆ ಆಸ್ತಿ ಬೇಡ ಎಂದು ಹೇಳುತ್ತಿದ್ದರು ಎಂದು ಹೇಳುತ್ತಾರೆ. ಈ ಬಗ್ಗೆ ಯಾವುದೇ ದಾಖಲೆ ಆಗಿಲ್ಲ ಎಂದರೆ ಸರಿ.

ನಿ.ಪಿ-17 ರ ಪ್ರಕಾರ ನನ್ನ ತಂದೆ ಬಸಣ್ಣನ ಹೆಂಡತಿ ಮತ್ತು ಮಕ್ಕಳ ವಿರುದ್ಧ ದಾವೆ ಮಾಡಿದ್ದರು ಎಂದರೆ ಸರಿ. ನಿ.ಪಿ-17 ರಲ್ಲಿ ಏನು ಬರೆಯಲಾಗಿದೆ ಎಂದು ನಾನು ನನ್ನ ವಕೀಲರಿಂದ ಕೇಳಿ ತಿಳಿದುಕೊಂಡಿಲ್ಲ. ದಾವಾ ನಂಬರ್

116/1997 ರಲ್ಲಿ ತೋರಿಸಿದ ವಂಶಾವಳಿಯಲ್ಲಿ ನನ್ನ ಅಜ್ಜನ ಬಸಪ್ಪ ಈತನಿಗೆ ಇಬ್ಬರು ಮಕ್ಕಳು ಮಾತ್ರ ಎಂದು ತೋರಿಸಿದ್ದಾರೆ ಎಂದರೆ ಸರಿ. ಸದರಿ ವಂಶಾವಳಿಯಲ್ಲಿ ವಾದಿ ಮತ್ತು ಹನುಮಕ್ಕ ಇವರ ಬಗ್ಗೆ ಉಲ್ಲೇಖ ಇಲ್ಲ ಎಂದರೆ ಗೊತ್ತಿಲ್ಲ. ಸದರಿ ಅಸಲು ದಾವಾ ನಂಬರ್ 116/1997 ರಲ್ಲಿನ ವಂಶಾವಳಿಯಲ್ಲಿ ಹೆಣ್ಣು ಮಕ್ಕಳನ್ನು ಕಾಣಿಸಿಲ್ಲ, ಆ ಕಾರಣದಿಂದ ಅದು ತಪ್ಪು ವಂಶಾವಳಿ ಎಂದರೆ ಸರಿ. ಅಸಲು ದಾವಾ ನಂಬರ್ 116/1997 ರ ದಾವೆಯ ಬಗ್ಗೆ ವಾದಿಗೆ ಮಾಹಿತಿ ಇದೆ. ವಾದಿ ನಮ್ಮ ಮನೆಗೆ ಬಂದು ಹೋಗುತ್ತಿದ್ದ ಕಾರಣ, ಅಸಲು ದಾವಾ ನಂಬರ್ 116/1997 ದಾಖಲು ಆಗಿದ್ದ ಬಗ್ಗೆ ಆಕೆಗೆ ಮಾಹಿತಿ ಇತ್ತು. ನನಗೆ ಈಗ 35 ವರ್ಷ ವಯಸ್ಸು ಇರುತ್ತದೆ. ನನ್ನ ಜನ್ಮದ ವರ್ಷ 1992 ಇರುತ್ತದೆ. ಅಸಲು ದಾವಾ ನಂಬರ್ 116/1997 ಇದನ್ನು ನನ್ನ ತಂದೆ ದಾಖಲಿಸಿದಾಗ ನನಗೆ 5 ವರ್ಷ ವಯಸ್ಸು ಎಂದರೆ ಸರಿ.

ಪಕ್ಕೀರವ್ವನ ಎಲ್ಲಾ ವಾರಸುದಾರರು ಆಕೆಯ ಆಸ್ತಿಯಲ್ಲಿ ಸಮಾನ ಹಿಸ್ಸೆ ಹೊಂದಿದ್ದಾರೆ ಎಂದರೆ ಸರಿ. ವಾದಿಗೆ ಹಿಂದಿನ ದಾವೆಯ ವಿಷಯ ಗೊತ್ತಿತ್ತು ಮತ್ತು ಆಕೆ ಆಸ್ತಿ ಬೇಡ ಎಂದು ಹೇಳಿದ್ದಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಈಗಲೂ ಸಹ ದಾವಾ ಆಸ್ತಿಗಳ ಜಂಟಿ ಸ್ವಾಧೀನಾನುಭವದಲ್ಲಿ ಇದ್ದಾಳೆ ಎಂದರೆ ಸಾಕ್ಷಿ ಆಕೆಗೆ ಏನು ಕೊಡಬೇಕಾಗಿದೆ ಅದನ್ನು ಕೊಟ್ಟಾಗಿದೆ ಎಂದು ಹೇಳುತ್ತಾರೆ. ನನ್ನ ತಂದೆ ಭಾಗಕ್ಕೆ ಬಂದ ಜಮೀನನ್ನು ಮಾರಿದಾಗ ವಾದಿಗೆ ಹಣ ಕೊಟ್ಟಿರುತ್ತೇವೆ. ವಾದಿಗೆ ಹಣವನ್ನು ನನ್ನ ತಂದೆ ಕೊಟ್ಟಿರುತ್ತಾರೆ, ಎಷ್ಟು ಮತ್ತು ಯಾವಾಗ ಕೊಟ್ಟರು ಎಂದು ಗೊತ್ತಿಲ್ಲ. ವಾದಿಗೆ ಹಣಕೊಟ್ಟ ಬಗ್ಗೆ ಯಾವುದೇ ದಾಖಲೆ ಇಲ್ಲ. ವಾದಿಗೆ ಕೊಡಬೇಕಾಗಿದ್ದನ್ನು ಕೊಟ್ಟಾಗಿದೆ ಎಂದು ಇದೇ ಮೊದಲ ಸಲ ಪಾಟೀ ಸವಾಲಿನಲ್ಲಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಕರಾರಿನಲ್ಲಿ

ಈ ವಿಷಯ ತಿಳಿಸಿಲ್ಲ ಎಂದರೆ ಸರಿಯಲ್ಲ. ಈ ವಿಷಯವನ್ನು ನಮ್ಮ ತಕರಾರಿನಲ್ಲಿ ತಿಳಿಸದೇ ಇದ್ದರೂ ತಿಳಿಸಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ಬಸಣ್ಣನ ವಾರಸುದಾರರು ಎಫ್.ಡಿ.ಪಿ ನಂಬರ್ 1/2001 ರಲ್ಲಿ ನಿ.ಪಿ-14 ರಂತೆ ನ್ಯಾಯಾಲಯಕ್ಕೆ ತಪ್ಪು ಮಾಹಿತಿ ನೀಡಿ, ಅಂತಿಮ ಡಿಕ್ರಿ ಪಡೆದುಕೊಂಡೇವು ಎಂದರೆ ಸಾಕ್ಷಿ ಅವರಿಗೆ ಬೇಕಿದ್ದರೆ ಅವಾಗಲೇ ಕೇಳಬೇಕಿತ್ತು ಎಂದು ಹೇಳುತ್ತಾರೆ. ವಾದಿಗೆ ಗೊತ್ತಾಗದ ಹಾಗೇ ಅಸಲು ದಾವಾ ನಂಬರ್ 116/1997 ರಲ್ಲಿ ಪ್ರಾಥಮಿಕ ಡಿಕ್ರಿ ಮತ್ತು ಎಫ್.ಡಿ.ಪಿ ನಂಬರ್ 1/2001 ರಲ್ಲಿ ಅಂತಿಮ ಡಿಕ್ರಿಯನ್ನು ಪಡೆದುಕೊಂಡಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ ವಾದಿ ಈ ದಾವೆ ಹಾಕುವವರೆಗೂ ನಮ್ಮೂರಿಗೆ ಬರುತ್ತಿದ್ದರು, ಈಗ ಈ ದಾವೆ ಹಾಕಿದ ನಂತರ ಬಿಟ್ಟಿದ್ದಾರೆ ಎಂದು ಹೇಳುತ್ತಾರೆ.

ವಾದಿ ಫೆಬ್ರುವರಿ 2021 ರಲ್ಲಿ ನನ್ನ ತಾಯಿಗೆ ಮತ್ತು 6,8 ಮತ್ತು 10 ಇವರಿಗೆ ನನ್ನ ಹಿಸ್ಸೆಕೊಡಿ ಎಂದು ಕೇಳಿದರು ಎಂದರ ಸರಿ. ನಾವು ವಾದಿಗೆ ಈಗಾಗಲೇ ಹಿಸ್ಸೆ ಮಾಡಿಕೊಂಡಿದ್ದೇವೆ, ನಾವು ಆಸ್ತಿ ಕೊಡುವುದಿಲ್ಲ ಎಂದು ಹೇಳಿದಾಗ ಈ ದಾವೆ ಮಾಡಿದರು ಎಂದರೆ ಸರಿ. ಈ ದಾವೆ ದಾಖಲು ಮಾಡಿದ ನಂತರ ವಾದಿ ನಮ್ಮ ಮನೆಗೆ ಬರುವುದನ್ನು ನಿಲ್ಲಿಸಿದರು ಎಂದರೆ ಸರಿ. ಈ ಕುರಿತು ಘಲಾಟೆ ಸಹ ಆಯಿತು ಎಂದರೆ ಸರಿಯಲ್ಲ. ಅಸಲು ದಾವಾ ನಂಬರ್ 116/1997 ರಲ್ಲಿನ ಮತ್ತು ಪ್ರಾಥಮಿಕ ಡಿಕ್ರಿ ಮತ್ತು ಎಫ್.ಡಿ.ಪಿ ನಂಬರ್ 1/2001 ರ ಅಂತಿಮ ಡಿಕ್ರಿ ವಾದಿಗೆ ಬಂಧನಕಾರಿ ಅಲ್ಲ ಎಂದರೆ ಸರಿಯಲ್ಲ. ವಾದಿಗೆ ಎರಡೂ ದಾವಾ ಆಸ್ತಿಗಳಲ್ಲಿ ಸಮನಾದ ಹಿಸ್ಸೆ ಇದೆ ಎಂದರೆ ಸರಿಯಲ್ಲ. 10 ನೇ ಪ್ರತಿವಾದಿಗೆ ನಾವು ಮಾಡಿಕೊಟ್ಟ ಕ್ರಯಪತ್ರ ವಾದಿಯ ಹಿಸ್ಸೆಗೆ ಬಂಧನಕಾರಿ ಅಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.